ಶ್ರೀ ಜಿ. ಎ. ತಿಮ್ಮಪ್ಪಗೌಡ.—ಕೊಡಗು ಸರ್ಕಾರ ಮೈಸೂರಿಗೇ ಸೇರಿರುವುದರಿಂದ ಈ ಅಂದಾಜನ್ನು ಬೇಗ ಮಂಜೂರು ಮಾಡಲು ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಪುನಃ ಇನ್ನೊಂದು ಸಲ ವಿಚಾರ ಮಾಡಿ ಒಂದೇ ಸರ್ಕಲ್ ಆಗಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳ ಮುಖಾಂತರ ಎಷ್ಟು ಮಟ್ಟಿಗೆ ಸಾಧ್ಯವೆಂಬುದನ್ನು ಸರ್ಕಾರದವರು ಪರಿಶೀಲಿಸುತ್ತಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಆಗಲೇ ಎಲ್ಲ ವಿಚಾರ ಮಾಡಿ "ಸಂಬಂಧಪಟ್ಟ ಜನರು ಸರ್ಕಾರದವರಿಂದ ಕೇಳಲ್ಪಟ್ಟ ಎಲ್ಲ ಪರತ್ತುಗಳಿಗೂ ಒಪ್ಪಿಗೆ ಇತ್ತಿರುವರೆ?" ಎಂದು ಕೇಳಿರುವುದಕ್ಕೆ "ಹೌದು." ಎಂದು ತಿಳಿಸಿದ್ದೀರಿ. ಈ ಕಾರಣದಿಂದ ಈ ಅಂದಾಜನ್ನು ಮಂಜೂರು ಮಾಡುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲ; ಕೊಡಗು ಸರ್ಕಾರ ಬೇರೆ ಇದ್ದಾಗ ಅಲ್ಲಿ ಬೇರೊಂದು ಸಲಹೆ ಯಿತ್ತು, ಈ ಅಣೆ ಮಾಡಬೇಕೆ ಅಥವಾ ಹಾರಂಗಿ ಹತ್ತಿರ ಮಾಡಬೇಕೆ ಎಂಬುದು ಯೋಚನೆಯಲ್ಲಿತ್ತು. ಈಗ ಸರ್ಕಲ್ ಒಂದೇ ಆಗಿರುವುದರಿಂದ ಇದನ್ನು ಪುನಃ ಪರಿಶೀಲನಬೇಕು.

Estimates for the supply of Power to the Electric Pumps at Yanagalli in Chamarajanagar Taluk.

Q.—239. **Sri U. M. MADAPPA** (Chamarajanagar).—

Will the Government be pleased to state :—

(*a*) the date on which the estimates pertaining to the supply of power to the Electric Pumps at Yanagalli in Chamarajanagar Taluk were submitted to the office of the Chief Electrical Engineer with a request to sanction the same;

(*b*) the date on which the abovementioned estimates were submitted to the Minister Concerned for the approval;

(*c*) whether they have sanctioned the same?

A.—**Sri H. K. VEERANNA GOWDH** (Minister for Public Works).—

(*a*) 17th November 1956.

(*b*) The estimate has been forwarded to Government on 1st March 1957 and is under consideration.

(*c*) Does not arise in view of reply to (*b*).

ಶ್ರೀ ಯು. ಎಂ. ಮಾದಪ್ಪ.—ಇಷ್ಟು ದಿವಸ ನಿಧಾನವಾದರೂ ಮಂಜೂರಾಗದಿರುವುದಕ್ಕೆ ಕಾರಣ ವೇನು?

*ಶ್ರೀ ಹೆಚ್. ಕೆ. ವೀರಣ್ಣಗೌಡ.—ನಿಧಾನವಾಗಿಲ್ಲ, ಈ ತಿಂಗಳು ಒಂದನೆಯ ತಾರೀಖು ಸರ್ಕಾರಕ್ಕೆ ಬಂತು, ಸೆಕ್ರೆಟೇರಿಯಟ್ಟಿನಲ್ಲಿ ಫೈಲು ಪರ್ಕಅವ್ ಆಗಬೇಕು.

ಶ್ರೀ ಯು. ಎಂ. ಮಾದಪ್ಪ.—ಸೆಕ್ರೆಟೇರಿಯಟ್ ಲೆವಲ್‌ಗೆ ಬಂದು ಆರು ತಿಂಗಳಾದರೂ ಮಿನಿಸ್ಟರ್ ಲೆವಲ್‌ಗೆ ಇನ್ನೂ ಬಂದಿಲ್ಲವೆ?

ಶ್ರೀ ಹೆಚ್. ಕೆ. ವೀರಣ್ಣಗೌಡ.—ಅಷ್ಟು ಕಾಲ ಪಾಗಿಲ್ಲ. ಅದು ಬಂದು 20 ದಿವಸವಾಗಿದೆ ಅಷ್ಟೇ. ಮಂತ್ರಿಗಳ ಬಳಿಗೂ ಬರುತ್ತದೆ. ಒಂದುವೇಳೆ ಈಚೆಗೇನಾದರೂ ಬಂದಿದ್ದರೂ ನಾನು ಅಸೆಂಬ್ಲಿ ಕೆಲಸದಲ್ಲಿ ನಿರತನಾಗಿರುವುದರಿಂದ ನೋಡದಿರಬಹುದು.

ಶ್ರೀ ಯು. ಎಂ. ಮಾದಪ್ಪ.—ಆದಷ್ಟು ಜಾಗ್ರತೆಯಾಗಿ ಮಂಜೂರು ಮಾಡುತ್ತೀರಾ?

ಶ್ರೀ ಹೆಚ್. ಕೆ. ವೀರಣ್ಣಗೌಡ.—ಮಾಡುತ್ತೇವೆ.

Iron Poles provided for supply of Power to Ummattoor in Chamarajanagar Taluk.

Q.—240. **Sri U. M. MADAPPA** (Chamarajanagar).—

Will the Government be pleased to state.—

(*a*) the number of iron poles provided from the Central Stores supplies (Electricity), Bangalore for supply of power to Ummattoor in Chamarajanagar Taluk;

(*b*) the number of such poles requested to be supplied by the Mysore Superintendent's Office to that Village?

A—**Sri H. K. VEERANNA GOWDH**—(Minister for Public Works)—

(*a*) 14.

(*b*) 147.

ಶ್ರೀ ಯು. ಎಂ. ಮಾದಪ್ಪ.—ಈ ಕೆಲಸ ಯಾವ ಸ್ಟೇಜಿನಲ್ಲಿದೆ?

*ಶ್ರೀ ಹೆಚ್. ಕೆ. ವೀರಣ್ಣಗೌಡ.—ಇಲಾಖೆ ತನ್ನ ಕೆಲಸಮಾಡಬೇಕಾಗಿದೆ. ಅಲ್ಲಿಂದ ವರದಿ ಬರಬೇಕು. ಯಾರೂ ತೆಗೆದುಕೊಳ್ಳದೆ ಹೋದರೆ ಬಹಳ ಕಷ್ಟ, ಸಂಬಂಧಪಟ್ಟ ವರದಿ ಬಂದ ಕೂಡಲೆ ಮುಂದಿನ ಕೆಲಸ ಮಾಡುತ್ತೇವೆ.

Reorganisation of the Educational System in the State.

Q.—262. **Sri S. S. KOLKEBAIL** (Brahmavar).—

Will the Government be pleased to state :—

(*a*) whether there is any proposal before them to reorganise the entire